ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಏಪ್ರೀಲ್ 2023–ಸಂಪುಟ–7 ಸಂಚಿಕೆ–05

# ದರ್ಪಣ




ನಿಪ್ಪಾಣಿಯಲ್ಲಿ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿರುವ "ಶಿವಪುತ್ರ ಸಂಭಾಜಿ" ನಾಟಕ ಪ್ರದರ್ಶನದ ಉದ್ಘಾಟನೆಯನ್ನು ಪ.ಪೂ ಪ್ರಾಣಲಿಂಗ ಸ್ವಾಮೀಜಿ ಹಾಗೂ ಪ. ಪೂ. ಬಸವ ಮಲ್ಲಿಕಾರ್ಜುನ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ, ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ, ಶ್ರೀ. ಬಸವಪ್ರಸಾದ ಜೊಲ್ಲೆ, ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಸೌ. ಪ್ರೀಯಾ ಜೊಲ್ಲೆ ಯವರು ನೆರವೇರಿಸುತ್ತಿರುವುದು.

## 2022–23ನೇ ಸಾಲಿನಲ್ಲಿ 35.1 ಕೋಟಿ ಲಾಭಗಳಿಸಿ

# ಪ್ರಗತಿ ಪಥದಲ್ಲಿರುವ ನಮ್ಮ ಹೆಮ್ಮೆಯ


## ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)

ಜೊಲ್ಲೆ ಗ್ರುಪ್ ಸಂಸ್ಥಾಪಕರಾದ ಸಂಸದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹಸಂಸ್ಥಾಪಕಿ, ಕರ್ನಾಟಕ ರಾಜ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ನೇತೃತ್ವದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯದ ವಿವಿದೆಡೆ ಶಾಖೆಗಳನ್ನು ತೆರೆಯುವ ಮೂಲಕ ತನ್ನ ಕಾರ್ಯಕ್ಷೇತ್ರವನ್ನು ವ್ಯಾಪಿಸಿರುವ ಚಿಕ್ಕೋಡಿ ತಾಲೂಕಿನ ಯಕ್ಸಂಬಾದ ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., (ಮಲ್ಟಿ–ಸ್ಟೇಟ) ಸಂಸ್ಥೆಯು 2022–23ನೇ ಸಾಲಿನ ಆರ್ಥಿಕ ವರ್ಷದಲ್ಲಿ 35 ಕೋಟಿ 01 ಲಕ್ಷಗಳಷ್ಟು ಲಾಭ ಗಳಿಸಿದೆ ಎಂದು ಸಂಸ್ಥೆಯ ಚೇರಮನ್ ಜಯಾನಂದ ಜಾಧವ ಹೇಳಿದರು.

ಚಿಕ್ಕೋಡಿ ಬೀರೇಶ್ವರ ಶಾಖೆಯ ಸಭಾಗೃಹದಲ್ಲಿ ಸೋಮವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಆರ್ಥಿಕ ವಲಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು ತಂದಿದ್ದರೂ ಸಹ ಬೀರೇಶ್ವರ ವರ್ಷದಿಂದ ವರ್ಷಕ್ಕೆ ಅರ್ಥಿಕವಾಗಿ ಸದೃಢವಾಗಿ ಬೆಳೆಯುತ್ತಿದೆ. ಕಳೆದ ವರ್ಷಕ್ಕಿಂತ ಸುಮಾರು 4.93 ಕೋಟಿ ಮೀರಿ ಅಂದರೆ ಶೇ.16.40 ರಷ್ಟು ಲಾಭಾಂಶದಲ್ಲಿ ಹೆಚ್ಚಳವಾಗಿದೆ ಎಂದರು. ಸಹಕಾರಿಯು 3,53,527 ಸದಸ್ಯರನ್ನು ಒಳಗೊಂಡು 31,39,23,700 ಶೇರು ಬಂಡವಾಳ, 3373 ಕೋಟಿ 41 ಲಕ್ಷ ರೂಪಾಯಿಗಳಿಗೂ ಮೀರಿ ಠೇವು ಸಂಗ್ರಹ, 3,621 ಕೋಟಿ 64 ಲಕ್ಷಗಳ ದುಡಿಯುವ ಬಂಡವಾಳ ಹೊಂದಿದ್ದು ರಾಜ್ಯದಲ್ಲಿ ಅತ್ಯುತ್ತಮ ಸಹಕಾರಿಯಾಗಿ ಹೊರಹೊಮ್ಮುತ್ತಿದೆ ಎಂದರು.

ಶ್ರೀ ಬೀರೇಶ್ವರ ಕೋ–ಆಫ್ ಕ್ರೆಡಿಟ್ ಸೊಸೈಟಿ ಲಿ, ಸಂಸ್ಥೆ (ಮಲ್ಟಿಸ್ಟೇಟ್)ಯು ಅಂತರರಾಜ್ಯ ಕಾಯ್ದೆಯಡಿ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಈಗಾಗಲೇ 154 ಶಾಖೆಗಳು ಸೇವಾ ನಿರತವಾಗಿವೆ. ಬರುವ ದಿನಗಳಲ್ಲಿ ಗೋವಾ ರಾಜ್ಯದಲ್ಲಿ 11, ಮಹಾರಾಷ್ಟ್ರ ರಾಜ್ಯದಲ್ಲಿ 35 ಹಾಗೂ ಕರ್ನಾಟಕದಲ್ಲಿ 52 ನೂತನ ಶಾಖೆಗಳನ್ನು ಪ್ರಾರಂಭಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಕಾರ ಇಲಾಖೆ ಅನುಮತಿ ನೀಡಿದೆ. ಬೀರೇಶ್ವರ ತನ್ನ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಹಾಗೂ ಸಂಸ್ಥೆಯ ಗ್ರಾಹಕರಿಗೆ ವಿಮೆ ಯೋಜನೆ ಜಾರಿಗೆ ತಂದಿದ್ದು 2022–23ನೇ ಸಾಲಿನಲ್ಲಿ 2 ಕೋಟಿ 33 ಲಕ್ಷಗಳಿಗೂ ಹೆಚ್ಚು ವಿವಿಧ ವಿಮೆ ಯೋಜನೆಯಡಿ ಸೌಲಭ್ಯ ನೀಡಲಾಗಿದೆ. ನೂತನ ಆಡಳಿತ ಕಚೇರಿ

### ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)




ಹಾಗೂ ಸ್ಟಾಪ್ ಕ್ವಾರ್ಟಸ್, ಬೀರೇಶ್ವರ ಸಭಾಗೃಹ ಜೊಲ್ಲೆ ಗ್ರುಪ್ ದಿನದಿಂದ ದಿನಕ್ಕೆ ಹೆಮ್ಮರವಾಗಿ ಬೆಳೆಯುತ್ತಿರುವುದರಿಂದ 2 ಅಂತಸ್ಥಿನ ನೂತನ ಆಡಳಿತ ಕಚೇರಿಯನ್ನು ಹಾಗೂ ನಮ್ಮ ಸಹಕಾರಿ ಹಿರಿಯ 40 ಜನ ಸಿಬ್ಬಂದಿಗೆ ಸ್ಟಾಪ್ ಕ್ವಾರ್ಟಸ್ ಹಾಗೂ ಸಹಕಾರಿಯ ಸದಸ್ಯರು ಮಕ್ಕಳ ಮದುವೆ ಸೇರಿದಂತೆ ವಿವಿಧ ಸಭೆ ಸಮಾರಂಭಗಳಿಗೆ 2 ಅಂತಸ್ಥಿನ ಹವಾನಿಯಂತ್ರಿತ ಬೀರೇಶ್ವರ ಸಭಾಭವನ ನಿರ್ಮಿಸಿದ್ದು, ಸಭಾಭವನವನ್ನು ಈಚೆಗೆ ಪೂಜ್ಯರ ಹಸ್ತದಿಂದ ಲೋಕಾರ್ಪಣೆಗೊಳಿಸಲಾಗಿದೆ ಎಂದರು.

ಬೀರೇಶ್ವರ ಕೋ–ಆಫ್ ಕ್ರೆಡಿಟ್ ಸೊಸೈಟಿ ಲಿ, ಸಂಸ್ಥೆ (ಮಲ್ಟಿಸ್ಟೇಟ್) ಯು ಅಂತರರಾಜ್ಯ ಕಾಯ್ದೆಯಡಿ ನೋಂದಣಿಯಾಗಿರುವುದರಿಂದ ಬರುವ ದಿನಗಳಲ್ಲಿ ಗುಜರಾತ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದಲ್ಲಿ ಶಾಖೆಗಳು ತೆರೆಯುವ ಚಿಂತನೆ ನಡೆದಿದ್ದು ಬರುವ ವಾರ್ಷಿಕ ಸಭೆಯಲ್ಲಿ ಈ ಕುರಿತು ನಿರ್ಣಯ ಮಂಡಿಸಲಾಗುವುದು ಎಂದರು.

ಪ್ರಧಾನ ವ್ಯವಸ್ಥಾಪಕ ರವೀಂದ್ರ ಚೌಗಲಾ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಯಕ್ಸಂಬಾ ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿ (ಮಲ್ಟಿ–ಸ್ಟೇಟ್)ಯು ಸಿಬ್ಬಂದಿಗೆ ನಿವೃತ್ತಿ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಸಹಕಾರ ಕ್ಷೇತ್ರದಲ್ಲಿ ಒಂದು ಮೈಲುಗಲ್ಲು ಸಾದಿಸಿದೆ. ಈ ಯೋಜನೆ ಈಗಾಗಲೇ ಸುಮಾರು 8 ಜನ ಸಿಬ್ಬಂದಿಗೆ ಅನ್ವಯವಾಗಿದೆ. ಪ್ರಧಾನ ವ್ಯವಸ್ಥಾಪಕರು, ಉಪಪ್ರಧಾನ ವ್ಯವಸ್ಥಪಕರು ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರು ಅವರಿಗೆ 25 ಸಾವಿರಗಳ ಪಿಂಚಣಿ, ಬಿ. ಗ್ರೇಡ್‌ದಲ್ಲಿ ಹಿರಿಯ ವ್ಯವಸ್ಥಾಪಕರು, ಕಿರಿಯ ವ್ಯವಸ್ಥಾಪಕರು ಹಾಗೂ ವ್ಯವಸ್ಥಾಪಕರು, ಸಿನಿಯರ್ ಕ್ಲರ್ಕ, ಜ್ಯೂನಿಯರ್ ಕ್ಲರ್ಕ್ ಇವರಿಗೆ 20 ಸಾವಿರ ರೂಗಳ ಪಿಂಚಣಿ ಹಾಗೂ ಗ್ರೇಡ್ ಸಿ ಯಲ್ಲಿ ಸಿನಿಯರ್ ಅಟೆಂಡರ್, ಜ್ಯುನಿಯರ್ ಅಟೆಂಡರ್, ಸಿನಿಯರ್ ಸೆಕ್ಯುರೇಟಿ, ಜುನಿಯರ್ ಸೆಕ್ಯುರಿಟಿ, ಸಿನಿಯರ್ ಡ್ರಾಯವರ ಹಾಗೂ ಜ್ಯೂನಿಯರ್ ಡ್ರಾಯವರ ಸಿಬ್ಬಂದಿಗೆ 15 ಸಾವಿರ ಪಿಂಚಣಿಯು ದೊರೆಯಲಿದ್ದು, ಸಹಕಾರ ಕ್ಷೇತ್ರದಲ್ಲಿ ಬೀರೇಶ್ವರ ಹೊಸ ಕ್ರಾಂತಿಯನ್ನು ಮಾಡಿ ಸಿಬ್ಬಂದಿ ನಿವೃತ್ತಿ ಜೀವನಕ್ಕೆ ಆಶ್ರಯವಾಗಿದೆ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಶ್ರೀ. ಅಪ್ಪಾಸಾಹೇಬ್ ಜೊಲ್ಲೆ, ಶ್ರೀ. ಯಾಶೀನ್ ತಾಂಬೂಳೆ, ಶ್ರೀ. ಸುನೀಲ ದೇಶಪಾಂಡ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ. ರಮೇಶ ಕುಂಭಾರ, ಶ್ರೀ. ಬಿ.ಎ.ಗುರವ, ಶ್ರೀ. ಎಸ್. ಕೆ.ಮಾನೆ, ಶೇಖರ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಪ್ರೋ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಹುಟ್ಟಿದ ಪ್ರತಿಯೊಂದು ಹೆಣ್ಣು ಮಗು ತನ್ನ ಜೀವನದುದ್ದಕ್ಕೂ ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಸ್ನೇಹಿತೆ, ಸಹೋದರಿ, ಸಹೋದ್ಯೋಗಿಯಾಗಿ ಹೀಗೆ ಹಲವಾರು ಹಂತಗಳನ್ನು ಪೂರೈಸುತ್ತಾಳೆ. ತಂದೆ–ತಾಯಿ, ಗಂಡ, ಮಕ್ಕಳು, ಕಚೇರಿ ಹೀಗೆ ತನ್ನವರನ್ನು ತನ್ನ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ, ಕಾಳಜಿಯಿಂದ, ಸಹನೆಯಿಂದ ಮತ್ತು ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಆದರೂ ನಮ್ಮ ಸಮಾಜದಲ್ಲಿ ಹೆಣ್ಣು ಹೆಚ್ಚು ಶೋಷಣೆಗೆ ಒಳಗಾಗುವುದು ದುರ್ದೈವ. ಹೀಗಾಗಿ ಹೆಣ್ಣಿಗೆ ಉನ್ನತ ಸ್ಥಾನಮಾನಗಳನ್ನು ನೀಡಬೇಕು ಎನ್ನುವ ಕೂಗು ಎಂದಿನಿಂದಲೂ ಇದೆ. ಆದರೆ ಇಂದಿಗೂ ಕೂಡ ಒಂಟಿ ಮಹಿಳೆ ತಡ ರಾತ್ರಿ ಇರಲಿ ಹಗಲಲ್ಲೂ ನಿರ್ಭಯವಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ. ಇಂತಹ ಸಮಸ್ಯೆಗಳ ನಡುವೆಯೂ ಮಹಿಳೆ ರಾಜಕೀಯವಾಗಿ, ಸಾಮಾಜಿಕವಾಗಿ ಹಲವಾರು ಕ್ಷೇತ್ರಗಳಲ್ಲಿ ಮುಂದಿದ್ದಾಳೆ. ಹಲವಾರು ರಂಗಗಳಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದ್ದಾಳೆ.

ಹೀಗಾಗಿ ಎಲ್ಲಾ ಅದ್ಭುತ ಮಹಿಳೆಯರ ಸಾಧನೆಯನ್ನು ಆಚರಿಸಲು ಪ್ರತಿ ವರ್ಷ ಮಾರ್ಚ್ 8 ರಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಕೊಂಚ ಮಹಿಳಾ ದಿನಾಚರಣೆಯ ಇತಿಹಾಸವನ್ನು ನೋಡುವುದಾದರೆ 1908ರಲ್ಲಿ ಅಮೆರಿಕದಲ್ಲಿ ಕಾರ್ಮಿಕ ಚಳವಳಿ ನಡೆದಿತ್ತು. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುವ ಮಹಿಳೆಯರು ಪಾಲ್ಗೊಂಡಿದ್ದರು. ಸುಮಾರು 15,000 ಮಹಿಳೆಯರು ನ್ಯೂಯಾರ್ಕ್ ಬೀದಿಗಳಲ್ಲಿ ಮೆರವಣಿಗೆ ನಡೆಸಿದ್ದರು ಮತ್ತು ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಿದ್ದರು. ತಮ್ಮ ಕೆಲಸದ ಅವಧಿಯನ್ನು ಕಡಿಮೆ ಮಾಡಬೇಕು ಮತ್ತು ವೇತನ ಶ್ರೇಣಿಯನ್ನು ಹೆಚ್ಚಿಸಬೇಕು ಎಂದು ಕಾರ್ಮಿಕ ಮಹಿಳೆಯರು ಒತ್ತಾಯಿಸಿದ್ದರು. ಮಹಿಳೆಯರಿಗೂ ಮತದಾನದ ಹಕ್ಕನ್ನು ನೀಡಬೇಕೆಂದು ಬೇಡಿಕೆಯಿಟ್ಟಿದ್ದರು. ಮಹಿಳೆಯರ ಧ್ವನಿ ಅಂದಿನ ಸರ್ಕಾರದ ಕಿವಿಗೆ ಬಿದ್ದಿತ್ತು. ನಂತರ 1909 ರಲ್ಲಿ, ಚಳುವಳಿಯ ಒಂದು ವರ್ಷದ ನಂತರ, ಅಮೇರಿಕಾದ ಸಮಾಜವಾದಿ ಪಕ್ಷ ಮಹಿಳಾ ದಿನವನ್ನು ಘೋಷಿಸಿತು. ಅಂದಿನಿಂದ ಮಾರ್ಚ್ 8 ರಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಮಹಿಳೆಯರ ಸಾಧನೆಯನ್ನು ನೆನೆಯುವ ಮೂಲಕ ಮಹಿಳೆಯರಿಗೆ ಪ್ರೋತ್ಸಾಹ ನೀಡಲಾಗುತ್ತದೆ. ನಾವು ಕೂಡ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಹಂಚಿಕೊಳ್ಳುವ ಮೂಲಕ ಮಹಿಳೆಯರಿಗೆ ಪ್ರೋತ್ಸಾಹವನ್ನು, ಉತ್ಸಾಹವನ್ನು ನೀಡೋಣ.

**ಮಹಿಳಾ ದಿನದ ಶುಭಾಶಯಗಳು, ಸಂದೇಶಗಳು ಮತ್ತು ಉಲ್ಲೇಖಗಳು**

* ರಾಣಿಯಂತೆ ಯೋಚಿಸು. ರಾಣಿಯು ವಿಫಲಗೊಳ್ಳಲು ಹೆದರುವುದಿಲ್ಲ. ವೈಫಲ್ಯವು ಶ್ರೇಷ್ಠತೆಗೆ ಮತ್ತೊಂದು ಮೆಟ್ಟಿಲು.
* ಸಮಾನ ಹಕ್ಕುಗಳು ವಿಶೇಷ ಹಕ್ಕುಗಳಲ್ಲ.
* ತಪ್ಪುಗಳ ವಿರುದ್ಧ ಧ್ವನಿ ಎತ್ತುವ ಮಹಿಳೆ ಬಲವಾದ ಮಹಿಳೆ – ಮೆಲಿಂಡಾ ಗೇಟ್ಸ್
* ಒಬ್ಬ ಮಹಿಳೆ ಮಾತ್ರ ಸಾವಿನ ಸಮಯದಲ್ಲಿ ಜನ್ಮ ನೀಡಲು ಸಾಧ್ಯ. ಹೆಣ್ಣಾಗಿರುವುದಕ್ಕೆ ಹೆಮ್ಮೆ ಪಡಬೇಕು.
* ಈ ದಿನ ನಿಮಗೆ ಸೇರಿದ್ದು. ನೀವು ಏಳಿಗೆ ಹೊಂದಿ ಮತ್ತು ಜೀವನದ ಹಾದಿಯಲ್ಲಿ ದೃಢವಾಗಿ ನಿಲ್ಲಿ.
* ಎಲ್ಲಾ ಸಮಯದಲ್ಲೂ ನಗುವನ್ನು ತುಂಬುವ ನೀನು ನನ್ನ ದಿನಗಳನ್ನು ಪ್ರಕಾಶಮಾನವಾಗಿ ಕಾಣುವಂತೆ ಮಾಡಿದಿ.
* ನಾನು ಯಾರೆಂದು ಇತರರು ನಿರ್ಧರಿಸಲು ನಾನು ಬಯಸುವುದಿಲ್ಲ. ನಾನೇ ಅದನ್ನು ನಿರ್ಧರಿಸಲು ಬಯಸುತ್ತೇನೆ. –ಎಮ್ಮ ವ್ಯಾಟ್ಸನ್
* ಅವಳೇ ಕನಸು, ಅವಳೇ ನಂಬಿಕೆ, ಅವಳೇ ಸಾಧನೆ ಮತ್ತು ಅವಳಿಂದಲೇ ನೀವು.
* ಅವಳು ಗುಂಪನ್ನು ಹಿಂಬಾಲಿಸುವುದಿಲ್ಲ ಬದಲಿಗೆ ಜನಸಮೂಹವನ್ನು ಅನುಸರಿಸುವಂತೆ ಮಾಡುತ್ತಾಳೆ.
* "ಮಹಿಳೆಯರು ಜಗತ್ತಿಗೆ ಬೆಳಕನ್ನು ತರುವ ಶಕ್ತಿ ಎಂದು ನಾನು ಭಾವಿಸುತ್ತೇನೆ." –ಮೆರಿಲ್ ಸ್ಟ್ರೀಪ್
* "ಸ್ತ್ರೀವಾದವು ಮಹಿಳೆಯರನ್ನು ಬಲಿಷ್ಠರನ್ನಾಗಿಸುವುದಲ್ಲ. ಮಹಿಳೆಯರು ಈಗಾಗಲೇ ಬಲಶಾಲಿಯಾಗಿದ್ದಾರೆ. ಈ ವಾದ ಜಗತ್ತು ಆ ಶಕ್ತಿಯನ್ನು ಗ್ರಹಿಸುವ ವಿಧಾನವನ್ನು ಬದಲಾಯಿಸುವ ಬಗ್ಗೆ. – ಜಿಡಿ ಆಂಡರ್ಸನ್
* ತಾಯ್ತನದಿಂದ ಹಿಡಿದು ಹೆಂಡತಿಯ ತನಕ, ಸಹೋದರಿಯಿಂದ ಕೊನೆಗೆ ಮಗಳವರೆಗೆ ಜೀವನದ ಪ್ರತಿಯೊಂದು ಹಂತದಲ್ಲೂ 'ಮಹಿಳೆ'ಯಲ್ಲಿ ಬಲವಾದ ಮಿತ್ರನಿಲ್ಲದೆ ಈ ಜೀವಕ್ಕೆ ಅಸ್ತಿತ್ವವಿಲ್ಲ.
* ಹೆಣ್ಣಾಗಿರುವುದೇ ಮಹಾಶಕ್ತಿ. ಅದನ್ನು ಆಚರಿಸಿ.
* ನಾನು ಸಶಕ್ತ ಮಹಿಳೆಯ ಬಗ್ಗೆ ಯೋಚಿಸಿದಾಗ, ಯಾವುದೇ ವ್ಯಕ್ತಿತ್ವ ನೆನಪಿಗೆ ಬರುವುದಿಲ್ಲ. ನನಗೆ ನೀವು ನನ್ನ ಸೂಪರ್ ಹೀರೋ.
* ನೀವು ಉಗ್ರ ಮತ್ತು ಧೈರ್ಯಶಾಲಿ!
* ಒಳ್ಳೆಯ ನಡತೆಯ ಮಹಿಳೆಯರು ಇತಿಹಾಸ ನಿರ್ಮಿಸಿದ್ದಾರೆ!
* ಮಹಿಳೆ ರತ್ನವಿದ್ದಂತೆ ಅದನ್ನು ನನ್ನ ಕಣ್ಣುಗಳಿಂದ ನೋಡಬೇಕೆಂದು ನಾನು ಬಯಸುತ್ತೇನೆ!
* ನೀವು ನನ್ನ ಜೀವನದ ನಿಜವಾದ ವಾಸ್ತುಶಿಲ್ಪಿ. ನಮ್ಮ ಕುಟುಂಬಕ್ಕಾಗಿ ನೀವು ಮಾಡುವ ಕೆಲಸ ಈ ಜನ್ಮದಲ್ಲಿ ತೀರಿಸಲಾಗದ್ದು.
* ಅಮ್ಮಾ ನೀವು ನನ್ನ ಸ್ಫೂರ್ತಿ ಮತ್ತು ಪ್ರೇರಣೆ.
* ನೀವು ಮಹಿಳೆಯಾಗಿದ್ದಕ್ಕಾಗಿ ಧನ್ಯವಾದಗಳು. ನೀವು ಇಲ್ಲದ ಜಗತ್ತನ್ನು ನಾನು ಕಲ್ಪಿಸಿಕೊಳ್ಳಲಾರೆ!
* "ನಿಮ್ಮ ಗುರಿಗಳತ್ತ ಶ್ರಮಿಸುವ ನೀವು ಅನೇಕರಿಗೆ ಸ್ಫೂರ್ತಿಯಾಗಿದ್ದೀರಿ"
* ನೀವು ಮಾಡುವ ಎಲ್ಲಾ ಕೆಲಸಗಳಿಗಾಗಿ ನಾನು ನನ್ನ ಹೃದಯದಿಂದ ಧನ್ಯವಾದ ಹೇಳಲು ಬಯಸುತ್ತೇನೆ!
* ನಾನು ಎಂದಿಗೂ ಅಳಲು ಮತ್ತು ನಾನು ವಿಫಲವಾದಾಗ ಎದ್ದೇಳಲು ಕಲಿಸಿದ ಅಸಾಮಾನ್ಯ ಮಹಿಳೆಯಿಂದ ನಾನು ಬೆಳೆದಿದ್ದೇನೆ.
* ನೀನೇ ಸೃಷ್ಟಿಕರ್ತ, ದುಷ್ಟ ನಾಶಕ, ನೀನು ಸಂತ ಮತ್ತು ನೀನೇ ಮಾರ್ಗದರ್ಶಕ. ನೀನಿಲ್ಲದ ಜೀವನ ಅಸಾಧ್ಯ. ದೇವರ ಅತ್ಯುತ್ತಮ ಮತ್ತು ಸುಂದರವಾದ ಈ ಸೃಷ್ಟಿಯನ್ನು ಆಚರಿಸಿ.
* ಅವಳು ಜೀವನವನ್ನು ರಚಿಸುವ ಶಕ್ತಿಯನ್ನು ಹೊಂದಿದ್ದಾಳೆ.
* ರಾಣಿ ಇರದ ರಾಜ ಇರಲು ಸಾಧ್ಯವಿಲ್ಲ. ಅವಳು ಇತಿಹಾಸ ರಚಿಸಿದ ಶಕ್ತಿ.
* ಮಹಿಳೆಯರು ಧೈರ್ಯ, ಭರವಸೆ ಮತ್ತು ಜೀವನದ ಸಾರಾಂಶ. ಈ ಮಹಿಳಾ ದಿನದಂದು ನಾವು ಜಗತ್ತನ್ನು ಅವರಿಗೆ ಉತ್ತಮ ಸ್ಥಳವನ್ನಾಗಿ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡೋಣ.

## ಜೊಲ್ಲೆ ಉದ್ಯೋಗ ಸಂಸ್ಥೆ

ಸಹಸ್ರಾರು ಲಕ್ಷಾಂತರ ಜನರಿಗೆ ಉಸಿರಾಗಿದೆ
ಅಸಹಾಯಕರ, ದುರ್ಬಲರ ರೈತರ ಬಾಳಿಗೆ ಹಸಿರಾಗಿದೆ
ಸರ್ವಜನಾಂಗದ ಮನ–ಮನೆ ಬೆಳಗಿದೆ॥
ಪ್ರೀತಿ, ಪ್ರೇಮ, ಸಾಮರಸ್ಯ ಸೌಹಾರ್ದ
ಮಾನವಿಯ ಮೌಲ್ಯ ಸಂಸ್ಥೆಯ ಅಂತರಂಗದಲ್ಲಿ ಅಡಗಿದೆ
ನಿತ್ಯ ಅಕ್ಷರ ದಾಸೋಹ, ನಿರ್ಮಲ ಮನದಿ ನಡೆದಿದೆ
ಸರ್ವಜನಾಂಗದ ಮನ–ಮನೆ ಬೆಳಗಿದೆ.
ಸಮತೆ–ಸಾರುವ ಮಮತೆಯ ತಾಯಿ ಬೇರಾಗಿದೆ.

ಶಿಸ್ತು, ಸಂಯಮತೆ, ದಕ್ಷತೆ–ಸಮಯ ಪರಿಪಾಲನೆ
ನ್ಯಾಯ ನೀತಿ ಪ್ರಾಮಾಣಿಕತೆಯ ಪಾಠಭೋದನೆ
ವೇದನೆ–ರೋಧನೆ ದೂರಿಕರಿಸಿ ಸಾಧನೆಯ ದಾರಿತೋರಿದೆ.
ತ್ಯಾಗಮೂರ್ತಿ ನಿಸ್ವಾರ್ಥ ಸೇವೆಗೆ ಸ್ಫೂರ್ತಿ
ನಂಬಿದವರಿಗೆ ಸಾರಥಿಯಾಗಿ ಹೆಚ್ಚಿಸುತ್ತಿದೆ ಕೀರ್ತಿ
ಸರ್ವರ ಮನದಲ್ಲಿ ಸದಾ ತುಂಬುತಿದೆ ಪ್ರೀತಿ
ವಾತ್ಸಲ್ಯದ ಖಣಿ ನಮ್ಮ ಹೆಮ್ಮೆಯ ಜೊಲ್ಲೆ ಉದ್ಯೋಗ ಸಂಸ್ಥೆ

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ವಿಶ್ವ ಪೈ ($\pi$) ದಿನ

ಪೈ ಅನ್ನು ಜಗತ್ತಿನ ಅದ್ಭುತ ಅನ್ವೇಷಣೆ ಎಂದು ಕರೆಯುತ್ತಾರೆ. ಗ್ರೀಕ್ ಭಾಷೆಯ ಈ ಪದದಿಂದ ಗಣಿತದ ಕಠಿಣ ಸೂತ್ರಗಳನ್ನು ಸುಲಭವಾಗಿ ಬಿಡಿಸಬಹುದು. ಮಾರ್ಚ್ 14 ವಿಶ್ವ ಪೈ ದಿನವಾಗಿದ್ದು, ಇದರ ಇತಿಹಾಸ, ಮಹತ್ವ ಮತ್ತು ಈ ವರ್ಷದ ಥೀಮ್ ತಿಳಿದುಕೊಳ್ಳೋಣ ಬನ್ನಿ.

### ಏನಿದು ಪೈ ದಿನ?

ಗಣಿತದ ಪೈ ನ ಜನಪ್ರಿಯತೆಯಿಂದಾಗಿ ಒಂದು ವಿಶೇಷ ದಿನವನ್ನು ನಿಗದಿಗೊಳಿಸಲಾಗಿದೆ. ಆ ದಿನವೇ ಮಾರ್ಚ್ 14. ಈ ದಿನವನ್ನು ವಿಶ್ವದೆಲ್ಲೆಡೆ ಪೈ ಡೇ ಎಂದು ಆಚರಿಸಲಾಗುತ್ತದೆ. ಪೈ ಎಂಬುದು ಗಣಿತದ ಸ್ಥಿರಾಂಕ. ಇದಕ್ಕೆ ನಿಖರ ಮೌಲ್ಯವಿಲ್ಲ. ಇದರ ಒಂದು ಅಂದಾಜು ಮೌಲ್ಯ 3.14159 ಎಂದು ಹೇಳಲಾಗುತ್ತಿದೆ. ಇದರ ದಶಮಾಂಶ ಸಂಖ್ಯೆ ಕೊನೆಗೊಳ್ಳುವುದೇ ಇಲ್ಲ. ಗಣಿತ ಮತ್ತು ವಿಜ್ಞಾನದಲ್ಲಿ ಈ ಪದ ಅಥವಾ ಸಂಕೇತ ತುಂಬಾ ಬಳಕೆಯಾಗುತ್ತದೆ. ಈ ಪದ ವೃತ್ತದ ಅಳತೆಗೆ ಸಂಬಂಧಿಸಿದೆ. ಇದನ್ನು ಹೆಚ್ಚಾಗಿ ತ್ರಿಕೋನ ಮತ್ತು ರೇಖಾ ಗಣಿತದ ಲೆಕ್ಕಗಳನ್ನು ಬಿಡಿಸಲು ಬಳಸಲಾಗುತ್ತದೆ. ವೃತ್ತ, ದೀರ್ಘ ವೃತ್ತ, ಗೋಳಗಳ ಮೌಲ್ಯ ಕಂಡು ಹಿಡಿಯಲು ಪೈ ಬೇಕೇ ಬೇಕು. ಈ ಪದವನ್ನು ಕಾಸ್ಮೊಲಾಜಿ, ಥರ್ಮೊಡೈನಾಮಿಕ್ಸ್, ಮೆಕ್ಯಾನಿಕ್ಸ್ ಮತ್ತು, ಎಲೆಕ್ಟ್ರೋಮ್ಯಾಗ್ನೇಟಿಕ್ ಕ್ಷೇತ್ರಗಳಲ್ಲಿ ಹೆಚ್ಚು ಬಳಸಲಾಗುತ್ತದೆ. ಈ ಕುರಿತಾಗಿ ಹಲವಾರು ಕೃತಿಗಳು ಕೂಡಾ ರಚನೆಗೊಂಡಿವೆ.

### ಈ ವರ್ಷದ ಥೀಮ್

ಪ್ರತಿಯೊಬ್ಬರಿಗೂ ಗಣಿತ ಎಂಬ ಥೀಮ್‌ನಡಿ (Mathematics for Everyone) ಈ ವರ್ಷ ವಿಶ್ವ ಪೈ ದಿನ ಆಚರಿಸಲಾಗುತ್ತದೆ.

### ಪೈ ಬಗ್ಗೆ ಇನ್ನಷ್ಟು ವಿವರ

ಗಣಿತ ಮತ್ತು ಭೌತ ವಿಜ್ಞಾನದಲ್ಲಿ ಎಲ್ಲೆಲ್ಲಿ ವೃತ್ತ ಬರುತ್ತದೆಯೊ ಅಲ್ಲೆಲ್ಲ ಪೈ ಪ್ರತ್ಯಕ್ಷ. ಪೂರ್ವದ ದಿನಗಳ ಬೆಬಿಲೊನಿಯಾ, ಈಜಿಪ್ತ್ ಗಣಿತಜ್ಞರಿಗೆ ಪೈ ಬೆಲೆ ಸರಿ ಸುಮಾರು 3.1 ಎಂದು ತಿಳಿದಿತ್ತು. ಆದರೆ ಪೈ ಎಂಬ ಮಾಯಾವಿ ಸಂಖ್ಯೆಯನ್ನು ಶೋಧಿಸಿದವರು ಯಾರು ಎಂಬುದು ಸ್ಪಷ್ಟವಾಗಿ ಯಾರಿಗೂ ತಿಳಿದಿಲ್ಲ. ಒಂದು ವೃತ್ತಕ್ಕೆ ಅದರದೇ ಆದ ಒಂದು ನಿರ್ದಿಷ್ಟ ಪರಿಧಿ ಎಂಬುದಿದೆ. ವೃತ್ತದ ಗೆರೆಯ ಮೇಲೆ ಒಂದು ಬಿಂದುವಿನಿಂದ ಹೊರಟ ನೀವು ಮತ್ತೆ ಅದೇ ಬಿಂದುವಿಗೆ ತಲುಪುತ್ತೀರಿ . ಗೆರೆಯ ಮೇಲೆ ನೀವು ಕ್ರಮಿಸಿದ ದೂರವೇ ಆ ವೃತ್ತದ ಪರಿಧಿ. ವೃತ್ತದ ಪರಿಧಿಯನ್ನು ಅದರ ವ್ಯಾಸದಿಂದ ಭಾಗಿಸಿದರೆ ದೊರೆಯುವ ನಿಷ್ಪತ್ತಿ (ಭಾಗಲಬ್ಧ) ಒಂದು ಸಂಖ್ಯೆ ಮಾತ್ರವಲ್ಲ. ಅದೊಂದು ನಿಯತಾಂಕ. ಈ ನಿಯತಾಂಕವೇ ಪೈ. ಒಂದು ವೃತ್ತದ ವ್ಯಾಸ ಇನ್ನೊಂದು ವೃತ್ತದ ವ್ಯಾಸದ ದುಪ್ಪಟ್ಟು ಇದ್ದರೆ, ಅದರ ಪರಿಧಿಯೂ ದುಪ್ಪಟ್ಟಾಗುತ್ತದೆ. ಆದರೆ ಇವರೆಡರ ನಿಷ್ಪತ್ತಿ ಮಾತ್ರ ಒಂದೇ. ಅದುವೇ ಪೈ. ಪೈ ಸೂಚಿತವಾಗಿರುವುದು ಗ್ರೀಕ್ ವರ್ಣಮಾಲೆಯ ಅಕ್ಷರದಿಂದ.


### ಪೈ ಹೆಸರಿನ ಇತಿಹಾಸ

ಬ್ರಿಟಿಷ್ ಗಣಿತಜ್ಞ ವಿಲಿಯಮ್ ಜೋನ್ಸ್ (1675–1749) ಪೈ ಅಕ್ಷರವನ್ನು ಅನುಪಾತವನ್ನು ಪ್ರತಿನಿಧಿಸಲು ಬಳಸಿದ ಮೊದಲ ಗಣಿತಜ್ಞ. ಇವರು ಇದನ್ನು 1706ರಲ್ಲಿ ಗಣಿತಶಾಸ್ತ್ರಕ್ಕೆ ಹೊಸ ಪರಿಚಯ ಎಂಬ ತಮ್ಮ ಪುಸ್ತಕದಲ್ಲಿ ಉಪಯೋಗಿಸಿದರು. ಆತನ ಸಮಕಾಲೀನ ಮತ್ತು ಶ್ರೇಷ್ಠ ಗಣಿತ ಶಾಸ್ತ್ರಜ್ಞ ಸ್ವಿಜರ್ಲೆಂಡ್‌ನ ಲಿಯಾನಾರ್ಡೊ ಆಯ್ಲರ್ (1700–1783) ಅದನ್ನೇ ಮತ್ತೆ ಮತ್ತೆ ತಮ್ಮ ಸಂಶೋಧನ ಲೇಖನಗಳಲ್ಲಿ ಬಳಸುತ್ತ ಪ್ರಚಾರಕ್ಕೆ ತಂದು ಅದಕ್ಕೊಂದು ಅಮರತ್ವ ನೀಡಿದರು. 1736ಕ್ಕೂ ಮುನ್ನ ವೃತ್ತದ ಸುತ್ತಳತೆ ಮತ್ತು ಅನುಪಾತವನ್ನು ಕಂಡು ಹಿಡಿಯಲು ಸಿ ಮತ್ತು ಪಿ ಎಂಬ ಅಕ್ಷರಗಳನ್ನು ಉಪಯೋಗಿಸಲಾಗುತಿತ್ತು.

### ಪೈ ಎನ್ನುವುದು ಆರ್ಕಿಮಿಡಿಸ್ ಕೊಡುಗೆ

ನಾವು ಸಾಮಾನ್ಯವಾಗಿ ಪೈ ಅಂದೊಡನೆ 22/7 ಎಂದು ಬರೆಯುತ್ತೇವೆ. ಇದು ಸುಪ್ರಸಿದ್ಧ. ಈ ಬಗೆಯನ್ನು ಸೂಚಿಸಿದವನು ಗ್ರೀಕ್‌ನ ಗಣಿತಜ್ಞ ಹಾಗೂ ಭೌತ ವಿಜ್ಞಾನಿ ಆರ್ಕಿಮಿಡಿಸ್. ವೃತ್ತ ಒಳ ಮತ್ತು ಹೊರಗೆ ಹಿಡಿಸುವಂತೆ ಬಹುಭುಜಾಕೃತಿಯನ್ನು ಎಳೆದದ್ದಾದರೆ, ಒಳಗಿನ ಬಹುಭುಜದ ಸುತ್ತಳತೆ ಮತ್ತು ಹೊರಗಿನ ಬಹುಭುಜದ ಸುತ್ತಳತೆಯ ನಡುವಣ ಬೆಲೆ ಪೈ ಆಗಿರುತ್ತದೆಂದು ಹೇಳಿದ್ದಲ್ಲದೆ ಪೈ ಬೆಲೆಯನ್ನು ಸರಿ ಸುಮಾರಾಗಿ 223/71 ಮತ್ತು22/7 ಇವೆರಡರ ನಡುವೆ ಇದೆ ಎಂದು ನಿರೂಪಿಸಿದ. 22/7 ಗರಿಷ್ಠ ಬೆಲೆ ನೀಡುತ್ತದೆ ಮತ್ತು ನೆನಪಿಡಲು ಸುಲಭ ಎಂದೇ ಇದು ಜನಪ್ರಿಯವಾಯಿತು.

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ






**ಉದ್ಘಾಟಿಸುತ್ತಿರುವುದು.**

ಕುನ್ನೂರು ಗ್ರಾಮದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹಾಗೂ ಕೂನ್ನುರ ಗ್ರಾಮ ಪಂಚಾಯತ ಸಹಯೋಗದಲ್ಲಿ ಆಯೋಜಿಸಿದ ಸ್ವಸಹಾಯ ಸಂಘಗಳ ಮಹಿಳೆಯರು ತಯಾರಿಸಿದ ವಸ್ತುಗಳ ಮಾರಾಟ ಮತ್ತು ಪ್ರದರ್ಶನ "ಮಾಸಿಕ ಸಂತೆ" ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸುತ್ತಿರುವ ದೃಶ್ಯ.



**ಪ್ರತಿಮೆ ಅನಾವರಣ**

ನಿಪ್ಪಾಣಿ ನಗರದ ಸಂಭಾಜಿ ವೃತ್ತದಲ್ಲಿ ಸರ್ವ ಸಮಾಜದ ಅಭಿಮಾನಿಗಳಿಂದ ನಿರ್ಮಾಣವಾಗಿರುವ ಶಿವಪುತ್ರ ಶ್ರೀ ಧರ್ಮವೀರ ಸಂಭಾಜಿ ಮಹಾರಾಜರ ಪ್ರತಿಮೆಯನ್ನು ಮುಜರಾಯಿ ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಅನಾವರಣಗೊಳಿಸಿದ ದೃಶ್ಯ.



**ಚಾಲನೆ ನೀಡುತ್ತಿರುವುದು**

ಮಾಂಗೂರು ಗ್ರಾಮದಲ್ಲಿ 60 ಲಕ್ಷ ರೂ. ಮೊತ್ತದಲ್ಲಿ ಮಾಂಗೂರು–ಬಾರವಾಡ ಮುಖ್ಯರಸ್ತೆಯಿಂದ ಬಾರವಾಡ ಗ್ರಾಮದ ಗಡಿಯವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡುತ್ತಿರುವುದು.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿಯಲ್ಲಿ ಲೋಕ ಕಲ್ಯಾಣ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫಲಾನುಭವಿಗಳ ಸಮಾವೇಶ ಮತ್ತು ವಿವಿಧ ಧನ ಸಹಾಯ ಚೆಕ್ ಮತ್ತು ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಜೊಲ್ಲೆ ದಂಪತಿ ಚಾಲನೆ ನೀಡುತ್ತಿರುವುದು.



**ಉದ್ಘಾಟಿಸುತ್ತಿರುವುದು**

ನಿಪ್ಪಾಣಿಯ ಮೇಸ್ತ್ರಿ ಗಲ್ಲಿ ತರುಣ ಮಂಡಳ ವತಿಯಿಂದ ಆಯೋಜಿಸಿದ ಅರಿಶಿನ – ಕುಂಕುಮ ಹಾಗೂ ಹೋಂ ಮಿನಿಸ್ಟರ್ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ, ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಸೌ. ಪ್ರೀಯಾ ಜೊಲ್ಲೆ ಯವರು ಉದ್ಘಾಟಿಸುತ್ತಿರುವುದು.




**ಚೆಕ್ ವಿತರಣೆ**

ವಿಜಯನಗರ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಫಲಾನುಭವಿಗಳ ಸಮಾವೇಶವನ್ನು ಕೇಂದ್ರ ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ ಅವರೊಂದಿಗೆ ವಿಜಯನಗರ ಜಿಲ್ಲೆಯ ಉಸ್ತುವಾರಿ ಹಾಗೂ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸಿ ಚೆಕ್ ವಿತರಿಸುತ್ತಿರುವುದು.



**ಚಾಲನೆ ನೀಡುತ್ತಿರುವುದ**

ಶಿರ್ಪೇವಾಡಿ ಗ್ರಾಮದಲ್ಲಿ ಕರ್ನಾಟಕ ನೀರಾವರಿ ನಿಗಮ ವತಿಯಿಂದ ಮಂಜೂರಾದ 53 ಲಕ್ಷ ರೂ ಅನುದಾನದಲ್ಲಿ, ವೇದಗಂಗಾ ನದಿಯಿಂದ ಪೈಪಲೈನ್ ಅಳವಡಿಸಿ, ಶ್ರೀ ಬಸವ ಏತ ನೀರಾವರಿ ಯೋಜನೆಗೆ ಜೊಲ್ಲೆ ದಂಪತಿ ಚಾಲನೆ ನೀಡುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ಡೋಣೆವಾಡಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮಂಜೂರಾದ 28.50 ಲಕ್ಷ ರೂ. ಮೊತ್ತದಲ್ಲಿ ಗ್ರಾಮದ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗೆ ಎರಡು ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ಚಾಲನೆ ನೀಡುತ್ತಿರುವುದು**

ಚಿಕ್ಕೋಡಿ ಲೋಕಸಭಾ ವ್ಯಾಪ್ತಿಯ ಹಂಚಿನಾಳ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮಂಜೂರಾದ 4 ಕೋಟಿ 95 ಲಕ್ಷ ರೂ. ಮೊತ್ತದಲ್ಲಿ ಹಂಚಿನಾಳ ಗ್ರಾಮದಿಂದ ಕೋಗನೋಳಿ ಗ್ರಾಮದವರೆಗೆ 4.5 ಕೀ.ಮೀ. ರಸ್ತೆ ನಿರ್ಮಾಣ ಕಾಮಗಾರಿಗೆ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ಚಾಲನೆ ನೀಡುತ್ತಿರುವುದು**

ಯಕ್ಸಂಬಾದಲ್ಲಿ ನೂತನವಾಗಿ ಪ್ರಾರಂಭವಾದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಅಮೆಚ್ಯುವರ್ ಕಬಡ್ಡಿ ಅಸೋಸಿಯೇಷನ್ ಸಂಸ್ಥೆಯ ಉದ್ಘಾಟನಾ ಸಮಾರಂಭ ಹಾಗೂ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳ ಸತ್ಕಾರ ಸಮಾರಂಭವನ್ನು ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರನ್ನು ಚಾಲನೆ ನೀಡುತ್ತಿರುವುದು.



**ವಾಸ್ತುಶಾಂತಿ**

ಶ್ರೀ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸಾಯಿಟಿ ಲಿ., ಇದರ ಶ್ರೀ ಬೀರೇಶ್ವರ ಭವನ ವಾಸ್ತುಶಾಂತಿ ಪೂಜಾ ಸಮಾರಂಭದ ನಿಮಿತ್ಯ ಜೊಲ್ಲೆ ದಂಪತಿ, ಗೋಪೂಜೆ, ಅಶ್ವಪೂಜೆ ನೆರವೇರಿಸಿ, ಹೋಂ–ಹವನ, ಪೂಜಾ ವಿಧಿ ವಿಧಾನಗಳನ್ನು ನೆರವೇರಿಸುತ್ತಿರುವ ದೃಶ್ಯ.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ– 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :– ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ